International Journal of Kannada Research
Volume 1
Issue 1
2015
International Journal of Kannada Research
www.kannadajournal.com

**ISSN: 2454–5813**
IJKR 2018; 4(4): 11-13
© 2018 IJKR
www.kannadajournal.com
Received: 03-08-2018
Accepted: 04-09-2018

**ಆಶಾ ರಾಣಿ ಕೆ.**
ಸಂಶೋಧನಾ ವಿದ್ಯಾರ್ಥಿ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**Correspondence**
**ಆಶಾ ರಾಣಿ ಕೆ.**
ಸಂಶೋಧನಾ ವಿದ್ಯಾರ್ಥಿ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

# ಭಾರತದಲ್ಲಿ ಲಿಂಗ ರಾಜಕಾರಣ

**ಆಶಾ ರಾಣಿ ಕೆ.**

ಈವ ಜಗತ್ತಿನಲ್ಲಿ ಏಕಕೋಶ ಜೀವಿಗಳನ್ನು ಹೊರತು ಪಡಿಸಿದರೆ ಉಳಿದೆಲ್ಲ ಜೀವಿಗಳಲ್ಲೂ ಹೆಣ್ಣು ಗಂಡು ಎಂಬ ಪ್ರಭೇದಗಳಿವೆ. ಪ್ರಾಣಿ, ಪಕ್ಷಿ, ಕೀಟಗಲಲ್ಲದೆ ಸಸ್ಯಗಳಲ್ಲಿಯೂ ಗಂಡು ಹೂ ಹೆಣ್ಣು ಹೂಗಳಿವೆ. ಜಗತ್ತು ಗಂಡು ಹೆಣ್ಣಿನ ಎರಡರ ಪರಸ್ಪರ ಸಮರದಲ್ಲಿ ಮುನ್ನೆಡಯುತ್ತಿದೆ. ಗಂಡು ಹೆಣ್ಣು ಎರಡೂ ಪರಸ್ಪರ ಪೂರಕ ಅಂಶಗಳು ಇದಕ್ಕೆ ಮಾನವ ಜಗತ್ತು ಹೊರತಾದುದಲ್ಲ, ಆದರೆ ಮಾನವ ಸಮಾಜದಲ್ಲಿ ಲಿಂಗ ಅಸಮಾನತೆ ರೂಡಿಯಲ್ಲಿದೆ. ಮನುಕುಲದ ಹುಟ್ಟಿನಿಂದನೂ ಹೆಣ್ಣು ಗಂಡಿನ ಅಡಿಯಾಳೇನೂ ಅಲ್ಲ. ಮನುಕುಲದ ವಿಕಾಸದ ಹಂತಗಳಲ್ಲಿ ಆಕೆ ಆತನ ಖಾಸಗಿ ಆಸ್ತಿಯೆಂದರು. ಮಾನವನ ಅಲೆಮಾರಿ ಹಂತದಿಂದಲೂ ಗಂಡು ತನ್ನ ಗುಂಪನ್ನು ಹೊರ ಶಕ್ತಿಗಳು ವಿರುದ್ದ ರಕ್ಷಿಸುವ ಜವಾಬ್ದಾರಿ ಹೊತ್ತ ಹಣ್ಣುಗಳನ್ನು ಮರದಿಂದ ಬೀಳಿಸಲು ಪ್ರಾಣಿಗಳನ್ನು ಓಡಿಸಲು ಕೈಯಲ್ಲಿ ಆತ ಹಿಡಿದ ದೊಣ್ಣೆ ಲೋಕದ ಮೇಲೆ ಅವನ ಹಿಡಿತವನ್ನು ಹೆಚ್ಚಿಸುವ ಉಪಕರಣವಾಯಿತು. ಭೂಮಿಯನ್ನು ಫಲವತ್ತತೆಯನ್ನು ಬದಲಿಸಲು ಸಾಧ್ಯವೆಂದು ತಿಳಿದ ರಸ್ತೆಗಳನ್ನು ನಿರ್ಮಿಸಿದ ದೇವಾಲಯಗಳನ್ನು ಕಟ್ಟಿದ ತನ್ನ ಸಾಮರ್ಥ್ಯವನ್ನು ಪಣಕ್ಕೊಡ್ಡಿದ ಲೋಕದಿಂದ ಬೇಕಾದ್ದನ್ನು ಪಡೆಯಲು ಲೋಕದ ಮೇಲೆ ಹಿಡಿತವಿರಿಸಿಕೊಂಡ ಸಾಧಿಸ ಬೇಕಾದ ಗುರಿಗಳಿಗಾಗಿ ಹೊಸದಾರಿಗಳನ್ನು ತೆರೆದುಕೊಂಡ ಹೊಸದನ್ನು ಕಂಡ ಕಟ್ಟಿದ ಹೊಸ ಲೋಕವನ್ನೇ ಕಂಡಿರಿಸಿದ, ಅದಕ್ಕಾಗಿಯೆ ಇಂದಿಗೂ ಈ ಲೋಕದ ಮೇಲಿನ ಹಿಡಿತ ಆಳುವ ಶಕ್ತಿ ಅವನ ಕೈಯಲ್ಲಿದೆ ಹಾಗಾದರೆ ಈ ಈ ಹೊಸದೊಂದು ಲೋಕ ಸೃಷ್ಟಿಯಲ್ಲಿ ಹೆಣ್ಣಿನ ಪಾಲುದಾರಿಕೆ ಕಡಿಮೆ ಕಾರಣ ಅವಳ ಜೀವಸೃಷ್ಟಿ ಹೆಣ್ಣಿನ ನಿರಂತರ ಬಸಿರು, ಬಾಣಂತನ, ಹಾಲು ಉಣಿಸುವಿಕೆ ಕಾರಣಗಳಿಂದಲೇ ಆಕೆ ಮನೆಯ ಸುತ್ತಲಿನ ಮನೆಯ ಒಳಗಿನ ಕೆಲಸಗಳಿಗೆ ಮೀಸಲಾಗಿ ಕೌಟುಂಬಿಕ ಚೌಕಟ್ಟಿನೊಳಗೆಯೆ ಉಳಿಯಬೇಕಾಯಿತು. ಹೀಗಾಗಿ ಪುರುಷ ಪ್ರಾಧಾನ್ಯತೆ ಹೆಣ್ಣಿನ ಅಧೀನತೆ ನೆಲೆಗೊಂಡಿತು. ಮಾನವ ಜನಾಂಗದ ಉಗಮದಿಂದಲೂ ಗಂಡಿಗಿರುವ ಜೈವಿಕ ಮೇಲುಗೈಯಿಂದ ಈ ಲೋಕದ ಏಕೈಕ ಅಧಿಪತಿಗಳಾಗುವ ಅವಕಾಶ ದೊರೆಯಿತು ಈ ಅವಕಾಶವನೆಂದೂ ಅವರು ಬಿಟ್ಟುಕೊಟ್ಟಿಲ್ಲ. ಈ ಹಿನ್ನೆಲೆಯಲ್ಲಿಯೇ ನಾವಿಂದು ಲಿಂಗರಾಜಕಾಣವನ್ನು ಗಮನಿಸಬೇಕು.

ಸಮುದಾಯದಲ್ಲಿ ಮಹಿಳೆಯರು ಸಾಧಿಸಿದ ಪ್ರಗತಿ ಆಧಾರದ ಮೇಲೆಯೇ ನಾನು ಆ ಸಮುದಾಯದ ಪ್ರಗತಿಯನ್ನು ಅಳೆಯುವುದು ಎಂದು ಡಾ. ಅಂಬೇಡ್ಕರ್ ಹೇಳಿದ ಈ ಮಾತು ದೇಶದ ಪ್ರಗತಿಗೂ ಹೆಣ್ಣಿನ ರಾಜಕೀಯಕ್ಕೂ ಇರುವ ಸಂಬಂಧವನ್ನು ಕುರಿತು ತಿಳಿಸುತ್ತದೆ. ಅಂಬೇಡ್ಕರ್ ಈ ಮಾತಿನ ಹಿನ್ನೆಲೆಯಲ್ಲಿ ಮಹಿಳಾ ರಾಜಕೀಯ ಇತಿಹಾಸವನ್ನು ನೋಡುವುದಾದರೆ ಪೌರಾಣಿಕ ಯುಗದ ಪ್ರಮೀಳಾ ** ರಾಜ್ಯದ ಉಲ್ಲೇಖದೊಂದಿಗೆ ಆರಂಭವಾಗುತ್ತದೆ. ಇತಿಹಾಸದ ಕಾಲಘಟ್ಟದಲ್ಲಿ ಅಲ್ಲೊಂದು ಇಲ್ಲೊಂದು ರಾಣಿಯರು ತುಂಡು ಪಾಳೆಗಾರರಾಗಿ, ಆಳರಸರಾಗಿ ರಾಜ್ಯಾಡಳಿತ ನಡೆಸಿದರು. ಝಾನ್ಸಿರಾಣಿ, ಕಿತ್ತೂರು ಚೆನ್ನಮ್ಮ, ಕೆಳದಿ ಚೆನ್ನಮ್ಮ, ರಾಣಿ ಅಬ್ಬಕ್ಕ ಹೀಗೆ ಕೆಲವೇ ಹೆಸುರಗಳು. ಇವರುಗಳಲ್ಲಿ ಬಹುತೇಕ ರಾಣಿಯರ ನಾಯಕತ್ವ ರಾಜಕೀಯ ಪ್ರಜ್ಞೆಯಿಂದ ಪ್ರೇರೆಪಿತವಾದುದಲ್ಲ. ಬಹುತೇಕರು ಗಂಡ ಸತ್ತ ಹಾಗೂ ಗಂಡು ಮಕ್ಕಳಿಲ್ಲದ ವಂಶಪಾರಂಪರ್ಯ ರಾಜ್ಯಾಡಳಿತದ ಪುರುಷ ಪ್ರತಿನಿಧಿಗಳಾಗಿಯೇ ಅಧಿಕಾರಕ್ಕೆ ಬಂದವರು. ಇಂದಿಗೂ ಈ ಸಮಾಜದಲ್ಲಿ ಈ ಪರಂಪರೆ ಮುಂದುವರೆದಿರುವುದನ್ನು ನಾವು ಕಾಣಬಹುದು. ನಮ್ಮ ದೇಶದ ಮೊದಲ ಮಹಿಳಾ ಪ್ರದಾನ ಮಂತ್ರಿ ಇಂದಿರಾಗಾಂದಿ, ಜಯಲಲಿತಾ, ರಾಬ್ಡಿದೇವಿ, ಸೊನಿಯಾಗಾಂಧಿ, ಇನ್ನು ಹಲವಾರು ಮಹಿಳೆಯರು ಗಂಡ–ಮಗ,

ತಂದೆಯ ವಾರಸುದಾರಾಗಿ ರಾಜಕೀಯ ಪ್ರವೇಶಿಸಿದರು. ಇಂತಹ ಮಹಿಳೆಯರು ಸ್ವಲ್ಪ ಕಾಲ ಸಕ್ರಿಯ ರಾಜಕಾರಣದಲ್ಲಿದ್ದು ನಂತರ ಮರೆಯಾಗಿಬಿಡುತ್ತಾರೆ.

ಮಹಿಳೆ ಬಹುಶಃ ರಾಜಕಾರಣದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದು ಸ್ವಾತಂತ್ರ್ಯ ಚಳುವಳಿಯಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಬೃಹತ್ ತೊರೆಯಾಗಿ ಭಾಗವಹಿಸಿದ ಮಹಿಳಾ ಸಮುದಾಯ ಸ್ವಾತಂತ್ರ್ಯ ಪಡೆದ ನಂತರ ರಾಜಕೀಯ ಸಂಸ್ಥೆಗಳಲ್ಲಿ ಭಾಗವಹಿಸಿದ್ದು ಕಡಿಮೆ ಸ್ವಾತಂತ್ರ್ಯದ ನಂತರ ಮಹಿಳಾ ಚಳುವಳಿಯ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಸಂಸತ್ತಿನಲ್ಲಿ ಕಾಣಿಸಿಕೊಂಡರು 1985ರ ನಂತರ ಸಂಸತ್ತಿನಲ್ಲಿ ಮಹಿಳೆಯರ ಸಂಖ್ಯೆ ಕುಸಿಯುತ್ತಲೆ ಇದೆ. ಮಹಿಳಾ ರಾಜಕಾರಣದ ಹಿನ್ನಲೆಯಲ್ಲಿ ಇದೊಂದು ಆಘಾತಕಾರಿ ವಿಷಯ. ಈ ದೃಷ್ಟಿಯಿಂದಲೇ ನಾವಿಂದು ಮಹಿಳಾ ಮೀಸಲಾತಿಯ ಪ್ರಸ್ತುತತೆಯನ್ನು ಮನಗಾಣಬೇಕು.

**ಮಹಿಳಾ ಮೀಸಲಾತಿ**

ಮೊದಲೇ ಹೇಳಿದ ಹಾಗೆ ಮಹಿಳೆ ಲಿಂಗನೆಲೆಯಲ್ಲಿ ದಮನಕ್ಕೆ ಒಳಗಾದವಳು ವಿಭಿನ್ನ ಜಾತಿ ವರ್ಗದ ಮಹಿಳೆಯರು ಎಲ್ಲರೂ ಶೋಷಿತರೇ ಹಾಗಾಗಿಯೇ ಮಹಿಳೆರೆಯಲ್ಲರೂ ದಲಿತರೇ ಅಸಮಾನ ಸ್ಥಿತಿಯಲ್ಲಿರುವ ಮಹಿಳಾ ವರ್ಗಕ್ಕೆ ಅವಕಾಶ ದಕ್ಕುವ ಪ್ರಬಲ ಪುರುಷ ಎಲ್ಲಾ ಅವಕಾಶಗಳನ್ನು ತಾನೇ ದಕ್ಕಿಸಿಕೊಳ್ಳದಂತೆ ಮಾಡಲು ಮಹಿಳೆಗೆ ಉದ್ಯೋಗ ರಾಜಕೀಯ ಅಧಿಕಾರಿಗಳಲ್ಲಿ ವಿಶೇಷ ಅವಕಶ ಕಲ್ಪಿಸುವ ಮೀಸಲಾತಿಯಲ್ಲಿ ಸಾಧ್ಯವಾಗಬೇಕಾದ ಅನಿವಾರ್ಯತೆ ಇದೆ. ಈ ತಾತ್ವಿಕ ಹಿನ್ನೆಲೆಯಲ್ಲಿ ಮಹಿಳಾ ಮೀಸಲಾತಿ ಚಿಂತನೆ ಬೆಳೆದಿದೆ.

ಮಹಿಳಾ ಮೀಸಲಾತಿಯ ಪ್ರಶ್ನೆ ಮೊಟ್ಟ ಮೊದಲಿಗೆ ಚರ್ಚೆಗೆ ಬಂದದ್ದು. 1980ರಲ್ಲಿ ಅಂತರಾಷ್ಟ್ರೀಯ ಮಹಿಳಾ ವರ್ಷ ಆಚರಣೆ ಬೀಜಿಂಗ್‌ನಲ್ಲಿ ನಡೆದಾಗ ಈ ವಿಷಯ ಜಾಗತಿಕ ವಿಷಯವಾಗಿ ಚರ್ಚೆಗೆ ಬಂತು ಅದರ ಫಲವಾಗಿಯೇ ಮಹಿಳಾಪರ ಚಿಂತನೆ, ಸಂಘಟನೆ, ಚಟುವಟಿಕೆಗಳು ರಾಷ್ಟ್ರೀಯ ಹಾಗೂ ಜಾಗತಿಕ ನೆಲೆಯಲ್ಲಿ ಗಂಬೀರವಾಗಿ ಕಾಣಿಸಿಕೊಂಡವು. ದೇಶದ ರಾಜಕೀಯದಲ್ಲಿ ನೇರ ಮತ್ತು ಪರಿಣಾಮಕಾರಿಯಾಗಿ ಪಾಲ್ಗೊಳ್ಳಲು ಮಹಿಳೆಯರಿಗೆ ಅವಕಾಶ ಇರಬೇಕು ಎನ್ನುವುದು ವಿಶ್ವದ ಎಲ್ಲ ಮಹೀಳೆಯರ ಹಕ್ಕೊತ್ತಾಯವಾಗಿ ಮುಂದಿಡಲಾಯಿತು. 1992ರಲ್ಲಿ ಸಂವಿಧಾನದ ಅನಚ್ಛೇದ 73–74ಕ್ಕೆ ತಿದ್ದುಪಡಿ ತಂದು ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ (ಗ್ರಾಮ ಪಂಚಾಯಿತಿ, ನಗರಸಭೆ) ಮಹಿಳೆಯರಿಗೆ 33% ಮೀಸಲಾತಿ ನೀಡಲಾಯಿತು. ನಮ್ಮ ಸಮಾಜದ ಬಹುಸಂಖ್ಯಾತ ಅನಕ್ಷರಸ್ಥ, ಕೆಳಸ್ತರದ, ಕೆಳ ಜಾತಿಯ ಹೆಣ್ಣು ಮಕ್ಕಳು ಸಾರ್ವಜನಿಕವಾಗಿ ರಾಜಕೀಯ ಅಧಿಕಾರ ಪ್ರಿಕ್ರಿಯೆಯಲ್ಲಿ ಭಾಗವಹಿಸಲು ಅವಕಾಶಗಳು ದಕ್ಕಿದವು. ಎನ್ನುವುದು ಸಂತೋಷಕರ ವಿಷಯವೇ. ಗ್ರಾಮೀಣ ಆಭಗದ ಈ ಮಹಿಳಾ ರಾಜಕಾರಣಗಳು ಗಂಡಂದಿರ ರಬ್ಬರ್ ಸ್ಟಾಂಪ್‌ಗಳಾಗಿದ್ದಾರೆ. ಆಡಳಿತದಲ್ಲಿ ಕುಟುಂಬದ ಹಸ್ತಕ್ಷೇಪ ಹೆಚ್ಚು ಎನ್ನುವ ಅಪವಾದಗಳು ಇವೆ.

ಈ ಸ್ಥಳಿಯ ಆಡಳಿತ ಮಹಿಳಾ ಮೀಸಲಾತಿ ಪ್ರಕ್ರಿಯೆಯೇ ಮುಂದುವರಿಕೆಯಾಗಿ ಶಾಸನಸಭೆ ಹಾಗೂ ಲೋಕಸಭೆಗಳಲ್ಲಿ ಮಹಿಳಾ ಮೀಸಲಾತಿ ಕಲ್ಪಿಸುವ ಬಗ್ಗೆ ಯೋಚಿಸಬೇಕು. ಮಹಿಳೆಯರ ರಾಜಕೀಯ ಪ್ರತಿನಿಧೀ ಕರಣವು ಹೆಚ್ಚಾದಲ್ಲಿ ಮಹಿಳೆಯರ ಸಮಸ್ಯೆಗಳು ಹಾಗೂ ಪ್ರಶ್ನೆಗಳ ಮತ್ತು ಪರಿಹಾರ ಮಾರ್ಗಕ್ಕೆ ವಿಸ್ತಾರ ಅವಕಾಶಗಳು ಸಿಗುತ್ತವೆ ಹಾಗೂ ಮಹಿಳಾ ಸಬಲೀಕರಣಕ್ಕೆ ದಾರಿಯಾಗುತ್ತದೆ ಎಂಬುದು ಮಹಿಳಾ ಮೀಸಲಾತಿವಾದದ ಸಮರ್ಥನೆಗೆ ಮುಖ್ಯ ಒತ್ತಾಸೆ. ಆರು ದಶಖಗಳ ಕಾಲ ಶಾಸನ ಸಭೆಯಲ್ಲಿ ಪುರುಷ ಪ್ರಧಾನ ಆಳ್ವಿಕೆಯಲ್ಲಿ ಭೂಮಿ, ಆಸ್ತಿಯಲ್ಲಿ ಸಮಾನ ಹಕ್ಕುಗಳನ್ನು ನಿರಾಕರಿಸುತ್ತಲೇ ಬರಲಾಗಿದೆ. ಉದ್ಯೋಗ ಎಟುಕಿಸಿಕೊಳ್ಳಲು ಇರುವ ಅಡತಡೆಗಳು ಇನ್ನೂ ಕಡಿಮೆಯಾಗಿಲ್ಲ. ಸ್ತ್ರೀ ಭ್ರೂಣ ಹತ್ಯೆಯಿಂದ ಹಿಡಿದು ವರದಕ್ಷಿಣೆ, ಅತ್ಯಾಚಾರ, ಆಸಿಡ್ ಸಿಡಿತ. ಮರ್ಯಾದಾ ಹತ್ಯೆ ಕೌಟುಂಬಿಕ ದೌರ್ಜನ್ಯ ಮುಂತಾದ ಸ್ತ್ರೀಯರ ಮೇಲಿನ ಕಾರ್ಯಗಳು ಹೆಚ್ಚುತ್ತಲೇ ಇವೆ. ಇಂತಹ ಸ್ಥಿತಿಯನ್ನು ಬದಲಾಯಿಸುವ ಸನ್ನಿವೇಶ ನಿರ್ಮಾಣಕ್ಕೆ ರಾಜಕೀಯ ಸಶಕ್ತಿಕರಣ ಅಗತ್ಯವಾಗಿ ಬೇಕು 33% ಮೀಸಲಾತಿ ಭಾರತದ ರಾಜಕೀಯ ಚರಿತ್ರೆಯನ್ನು ಬದಲಾಯಿಸಬಲ್ಲದು ಅದಕ್ಕಾಗಿಯೇ ಭಾರತದ ಪುರುಷಾದಿ ಇದುವರೆಗೂ ಮೀಸಲಾತಿ ಮಸೂದೆಯನ್ನು ಬಲವಾಗಿ ವಿರೋಧಿಸುತ್ತಿರುವುದು ಮೀಸಲಾತಿಯ ವಿರೋದಕ್ಕೆ ಮುಖ್ಯವಾಗಿ ಗುರುತಿಸುವ ಕಾರಣಗಳೆಂದರೆ ಮೊದಲನೆಯದಾಗಿ ಈ ಮಸೂದೆ ಅಂಗೀಕಾರವಾದರೆ ಮೇಲ್ವರ್ಗದ ಮಹಿಳೆಯರ ಅಧಿಕಾರಕ್ಕೆ ಬರುತ್ತಾರೆ. ಹಾಗಾಗಿ ಮೀಸಲಾತಿಯ ಒಳಗೆ ಮತ್ತೊಂದು ಮೀಸಲಾತಿಯು ಬೇಕಿದೆ ಒಳಮೀಸಲಾತಿ ಪ್ರಸ್ತಾಪ ಮಹಿಳೆಯರ ರಾಜಕೀಯ ಪ್ರವೇಶ ಕುಟುಂಬದ ನೆಮ್ಮದಿ ಕೆಡಿಸುತ್ತದೆ. ಮಹಿಳಯರಿಗೆ ರಾಜಕೀಯ ಜ್ಞಾನ ಇಲ್ಲ, ಅವರು ಆಡಳಿತ ಸಮರ್ಥರಲ್ಲ ಹೀಗಾಗಿ ಈ ಮಸೂದೆಯಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು ಎಂಬ ವಾದವನ್ನು ಮಂಡಿಸುತ್ತಾರೆ.

ಮಹಿಳೆ ಆಡಳಿತಕ್ಕೆ ಸಮರ್ಥಳಲ್ಲ ಎಂಬ ವಾದದಲ್ಲಿ ಅವಳ ಸಾಮರ್ಥ್ಯವನ್ನು ಅಳೆಯುವರು ಯಾರು ಮತ್ತು ಹೀಗೆ ಅಳೆಯುವ ಮಾನದಂಡ ಯಾವುದು? ದೇಶವನ್ನು ಸಮರ್ಥವಾಗಿ ವರ್ಷಗಳ ಕಾಲ ಆಳಿದ ಇಂದಿರಾಗಾಂದಿ ತಮಿಳುನಾಡಿನ ಅಮ್ಮನೆಂದೆ ತಮಿಳುನಾಡಿನಾದ್ಯಂತ ಪ್ರಸಿದ್ಧಳಾಗಿದ್ದ ಜಯಲಲಿತಾ, ಪಶ್ಚಿಮ ಬಂಗಳಾದಲ್ಲಿ ಇಂದಿಗೂ ಸಮರ್ಥವಾಗಿ ಅಧಿಕಾರ ನಡೆಸುತ್ತಿರುವ ಮಮತಾ ಬ್ಯಾನರ್ಜಿ ಆಗಲಿ ದೇಶದ ಅತ್ಯುನ್ನತ ಹುದ್ದೆಯಾದ ರಕ್ಷಣಾ ಹುದ್ದೆ ನಿಭಾಯಿಸುತ್ತಿರುವ ನಿರ್ಮಲಾ ಸಿತಾರಾಮನ್ ಆಗಲಿ ಮಹಿಳೆಯರಲ್ಲವೆ. ಇವರುಗಳಲ್ಲಿ ಇರುವ ಶಕ್ತಿ ಸಾಮರ್ಥ್ಯ ರಾಜಕೀಯ ಜ್ಞಾನ ಮಹಿಳೆಯರಲ್ಲಿ ಮಂಕಾಗಿ ಇರುವುದಿಲ್ಲ. ಕುಟುಂಬದ ಯಜಮಾನನಾಗಿ ಅಧಿಕಾರ ಹಿಡಿದಿರುವ ಪುರುಷರಿಗೆ ಕುಟುಂಬದ ಕರ್ತವ್ಯಗಳು, ಜವಾಬ್ದಾರಿಗಳು ಅವನಿಗೆ ಸಂಬಂಧಿಸಿದ್ದಲ್ಲವೆ ಅದು ಮಹಿಳೆಯರದಷ್ಟೇ ಆಗಬೇಕು ಏಕೆ? ಒಳಮೀಸಲಾತಿ ಬೇಡಿಕೆ ಮಹಿಳೆ ಒಂದು ಶೋಷಿತ ಸಮುದಾಯ ಎಂಬ ತತ್ವಕ್ಕೆ ವಿರುದ್ಧವಾದುದು. ಅಂದರೆ ಮಹಿಳೆಯರ ವಿರುದ್ಧ ಮಹಿಳೆಯರನ್ನು ಎತ್ತಿಕಟ್ಟುತ್ತದೆ. ಮಹಿಳೆ ಹೀಗೆ ಅಸ್ತಿತ್ವವಿಲ್ಲದ ಅಸಹಾಯಕ ಸ್ಥಿತಿಯಲ್ಲಿರುವಷ್ಟು ಕಾಲ ತಾವು ನಿರಾಂತಕವಾಗಿ ಸುಸ್ಥಿತಿಯಲ್ಲಿರಬಹುದು ಎನ್ನುವುದು ಪುರುಷನಿಗೆ ಚೆನ್ನಾಗಿ ಗೊತ್ತು ಆದ್ದರಿಂದ ಹುರುಳಿಲ್ಲದ ವಾದಗಳನ್ನು ಮಾಡುತ್ತ ಮಹಿಳಾ ಮೀಸಲಾತಿ ಮಸೂದೆಯನ್ನು ತಡೆಯುತ್ತಿದ್ದಾನೆ. ಇದರ ಹಿಂದೆ ಇರುವುದು ಮತ್ತದೆ ಪುರುಷಾಸಕ್ತಿ ಯಲ್ಲದೇ ಮತ್ತೇನೂ ಇಲ್ಲ.

ರಾಜಕೀಯ ಇನ್ನು ಪುರುಷರ ಭದ್ರಕೋಟೆಯೇ ಆಗಿದೆ. ಸಮಾಜದಲ್ಲಿನ ಎಲ್ಲಾ ಅಧಿಕಾರದ ಗೂಟಗಳನ್ನು ಇನ್ನೂ ಪುರುಷನೇ ಹೊಂದಿರುವಾಗ ಮಹಿಳೆಯ ಪಾತ್ರಗಳನ್ನು ನಿರ್ವಹಿಸುವನು ಮತ್ತು ನಿರ್ಧರಿಸುವನು ಪುರಷನೇ ಆಗಿರುತ್ತಾನೆ. ಆದ್ದರಿಂದಲೇ ಮಹಿಳಾ ಮೀಸಲಾತಿಯನ್ನುವುದು ಕಾನೂನುದತ್ತವವಾಗಬೇಕಾದ್ದು ಇಂದಿನ ಅಗತ್ಯವಾಗಿದೆ. ಮೀಸಲಾತಿ ಪ್ರತ್ರಿಕ್ರಿಯೆಯು ಬದಲಾವಣೆಯನ್ನು

ತರುತ್ತದೆಯನ್ನುವುದು ನಿಜವಾದರೂ ಕ್ರಾಂತಿಕಾರಿ ಬದಲಾವಣೆಯನ್ನೇನೂ ತರುವುದಿಲ್ಲ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಹಿಂಸೆ ಅಸಮಾನತೆಯ ನಿವಾರಣೆಯತ್ತ ಮಹಿಳಾ ಸಮಾನತೆ ಮತ್ತು ಸಬಲೀಕರಣದ ಹಿನ್ನೆಲೆಯಲ್ಲಿ ಒಂದು ದಿಟ್ಟ ಹೆಜ್ಜೆಯಾಗಿಯೇ ಮಹಿಳಾ ಮೀಸಲಾತಿ ನೋಡಬೇಕಿದೆ.

ಒಬ್ಬ ಗರಿಷ್ಟ ಶೋಷಿತ ಪುರುಷ'ನಿಂದಲೂ ಮಹಿಳೆ ಶೋಷಣೆಗೆ ಒಳಗಾಗುತ್ತಿದ್ದಾಳೆ ಎಂದರೆ ಮಹಿಳಾ ಶೋಷಣೆ'ಯ ಸ್ವರೂಪ ಇನ್ನೆಂತಹುದು: ಭಾರತದಂತಹ ಪುರುಷ ಹಿತಾಸಕ್ತಿಯೇ ಪ್ರಧಾನವಾಗಿರುವ ಸಮಾಜದಲ್ಲಿ ಮಹಿಳಾ ಮೀಸಲಾತಿಯ ಅವಶ್ಯಕತೆ ಅರ್ಥವಾಗಬೇಕಾದರೆ ದೊಡ್ಡ ಸಂಶೋದನೆ ಬೇಕಾಗಿಲ್ಲ. ಒಂದು ಬಾರಿ ನಮ್ಮ ವಿಧಾನಸೌದ, ಶಾಸಕರ ಭವನ, ಲೋಸಭೆ ರಾಜ್ಯಸಭೆಗಳನ್ನು ಸುತ್ತು ಹಾಕಿದರೆ ಸಾಕು, ಸ್ವಾತಂತ್ರ್ಯ ಬಂದು 64 ವರ್ಷಗಳ ನಂತರವೂ ಇಲ್ಲೆಲ್ಲಾ ಬೆರಳೆಕೆಷ್ಟು ಹೆಂಗಸರನ್ನು ನೋಡಲು ಸಾಧ್ಯವಾಗಿಲ್ಲ, ಮೊದಲೇ ಗುರುತಿಸಿದ ಹಾಗೆ 1985ರ ನಂತರ ಸಂಸತ್‌ನಲ್ಲಿ ಮಹಿಳೆಯರ ಸಂಖ್ಯೆ ಕುಸಿಯುತ್ತಲೆ ಇದೆ. ಹೆಚ್ಚೆಚ್ಚು ಶಿಕ್ಷಣ ಆಧುನಿಕತೆಯ ಕಡೆ ಮಹಿಳೆ ತೆರೆದುಕೊಳ್ಳುತ್ತಿದ್ದರೂ ರಾಜಕೀಯ ಪ್ರಾತಿನಿದ್ಯ ಋಣಮುಖವಾಗದೆ ಇಳಿಮುಖವಾಗುತ್ತಿರುವುದು ಆತಂಕದ ವಿಷಯ. ಹಾಗಾಗಿ ಇಂದು ಗುಣಾತ್ಮಕ ಮಹಿಳಾ ನಾಯಕತ್ವದ ಅನಿವಾರ್ಯತೆ ಇದೆ.